ನೋಟಿಫಿಕೇರ್ಷ.

ಬೆಂಗಳೂರು ತಾರೀಖು 4ನೇ ಸೆಪ್ಟಂಬರ್ 1896.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಾಗುವ ತಖ್ತೇಲಿ ಕಂಡ ತಾರೀಖು ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟುಗಳಲ್ಲಿರುವ ವಣ ಬಿದರುಗಳನ್ನು ಕಡದು ಸಾಗಿಸಿಕೊಳ್ಳತಕ್ಕ ಹಕ್ಕುದಾರಿಯು ಹರಾಜ್ ಮಾಡಲ್ಪಡುತ್ತೆ. ಈ ಹರಾಜು ಡೆಪ್ಯೂಟಿ ಕಮ್ಮಿಷರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ನಂಬರ್.	ತಾಲ್ಲೂಕು ಹೆಸರು.	ಫಾರೆಸ್ಟು ಹೆಸರು.	ಹರಾಜ್ ತಾರೀಖು.	ಹರಾಜ್ ಸ್ಥಳ.	ಯಾವ ಆಫಿಸರ ಹರಾಜ್ ಮಾಡುತ್ತಾರೆ.
1	ಆನೇಕಲ್ ..	ರಾಗಿಹಳ್ಳಿ ..	10ನೇ ನವಂಬರ್ 1896	ಬನ್ನೇರಘಟ್ಟ	ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್.
2	ಕಾನಖಾನಹಳ್ಳಿ ..	ಬಿಳಿಕಲ್ ..	14ನೇ ಡಿಟೋ	ಕಾನಖಾನಹಳ್ಳಿ	
3	ಡಿಟೋ ..	ಬಾಣಂತಿವಾರಿ ..	ಡಿಟೋ	ಡಿಟೋ	
4	ಡಿಟೋ ..	ಮುಗ್ಗೂರು ..	18ನೇ ಡಿಟೋ	ಕೋಡಿಹಳ್ಳಿ	
5	ಡಿಟೋ ..	ಚಿಲ್ಲಂದಾಡಿ ..			
6	ಮುಳವಳ್ಳಿ ..	ಬಸವನಬೆಟ್ಟ ..	23ನೇ ಡಿಟೋ	ಹಲಗೂರು	
7	ಕಾನಖಾನಹಳ್ಳಿ ..	ಕಬ್ಬಾಳದುರ್ಗ ಮತ್ತು ಭೀಮನಕಂಡಿಬೆಟ್ಟ ..	27ನೇ ಡಿಟೋ	ಹನಿಯೂರು	
8	ಚನ್ನಪಟ್ಣ ..	ತೆಂಗಿನಕಲ್ ..	30ನೇ ಡಿಟೋ	ಚನ್ನಪಟ್ಣ	
9	ಕೊಯ್ನೇಪೇಟೆ ಸಬ್ ತಾ|| ..	ಹಂದಿಗೊಂದಿ ..	2ನೇ ಡಿಸೆಂಬರ್1896	ಕೊಯ್ನೇಪೇಟೆ	
10	ಡಿಟೋ ..	ಹುಲ್ತಾರು ...			
11	ಮಾಗಡಿ ..	ಸಾವಂದುರ್ಗ ..	7ನೇ ಡಿಟೋ	ಮಾಗಡಿ	
12	ದೊಡ್ಡಬಳ್ಳಾಪುರ ..	ಹುಲಕಡಿ ಮತ್ತು ವುಜ್ಜನಿ	14ನೇ ಡಿಟೋ	ಜಾಲಗೆರೆ	

2. ದೊಡ್ಡ ಫಾರೆಸ್ಟುಗಳು ಅಂದರೆ, ಬಿಳಿಕಲ್, ಬಸವನಬೆಟ್ಟ, ಮುಗ್ಗೂರು, ಚಿಲಂದಾಡಿ, ಹಂದಿಗೊಂದಿ ಮತ್ತು ಸಾವಂದುರ್ಗ ಯಿವುಗಳನ್ನು ಸ್ವಾಭಾವಿಕವಾದ ಸರಹದ್ದುಗಳಿಂದಲಾಗಲಿ ಅಥವಾ ಬೇರೇ ಗುರ್ತುಗಳಿಂದಲಾಗಲಿ ಅನುಕೂಲವಾದ ಬ್ಲಾಕುಗಳಾಗಿ ವಿಂಗಡಿಸಲ್ಪಡುವುದು.

3. ಹರಾಜ್ ಆದ ವಡನೆ ಹರಾಜ್‌ದಾರನು ಕೇಕಡಾ 25 ರೂಪಾಯಿ ಡಿಪಾಜಿಟ್ ಕೊಡಬೇಕು. ಬಾಕಿ ಹಣ ಹರಾಜ್ ತಾರೀಖು ಲಾಗಾಯತು 30 ದಿನಸಗಳಲ್ಲಿ ಹಾಜರ್ಮಾಡಬೇಕು. ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಕೀಟಿಸಿಕೊಳ್ಳಲ್ಪಡುತ್ತೆ ಮತ್ತು ಹಕ್ಕನ್ನು ಪುನಹ ಹರಾಜುಮಾಡಿ ಮೊದಲನೇ ಹರಾಜ್‌ದಾರನನ್ನು ಲುಕ್ಸಾನಿಗೆ ಗುರುಮಾಡುತ್ತೆ. 2ನೇ ಹರಾಜಿನಲ್ಲಿ ಜಾಸ್ತಿ ಹುಟ್ಟುವಿ ಏನಾದರೂ ಆದರೆ ಅದಕ್ಕೆ ಅವನಿಗೆ ಹಕ್ಕುದಾರಿ ಏನೂ ಯಿರುವದಿಲ್ಲ.

4. ಫಾರೆಸ್ಟಿನಲ್ಲಿ ಅಥವಾ ಫಾರೆಸ್ಟ ಪ್ರದೇಶದಲ್ಲಿ ಬೆಂಕಿಏನಾದರೂ ಬಿದ್ದರೆ ಅದಕ್ಕೆ ಹರಾಜ್‌ದಾರನೇ ಜವಾಬ್ದಾರನಾಗಿರತಕ್ಕದ್ದು. ಅವನಿಗೆ ಗೊತ್ತುಮಾಡಿದ ಪ್ರದೇಶದಲ್ಲಿ ಕಂಟ್ರಾಕ್ಟುದಾರನೇ ಆಗಲಿ ಅಥವಾ ಅವನ ಕಡೆ ಜನರೇ ಆಗಲಿ ಏನಾದರೂ ಅಕ್ರಮನಡಿಸಿದ ಪ್ರೈ ಫಾರೆಸ್ಟ ರೂಲ್ಸ ಮೇರೆ ನಡಿಸಲಾಧೀತು.

ಮುದ್ದಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರ್.

ಬೆಂಗಳೂರ್ ಡಿಸ್ಟ್ರಿಕ್ಟು.

ತಾರೀಖು 28ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ಗ್ರಾಮಾಂತರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿ ಸಂವತ್ಸರದ ಬಾಬನ್ನು 1896ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1896ನೇ ಇಸವಿ ಜೂರ್ 25ನೇ ಮತ್ತು ಮಿನ 25ನೇ ನಂಬರ್ ಗೆಜೆಟ್ಟುನಲ್ಲಿ ಘಾಯಿಷ್ ಮಾಡಿತ್ತಪ್ಪೆ, ಇದನ್ನ ಬದಲಾಯಿಸಿ 1896ನೇ ಇಸವಿ ಅಕ್ಟೋಬರ್ ತಾರೀಖು 1ರಲ್ಲು ದುಸರಾ ಹರಾಜು ಮಾಡಲ್ಪಡುತ್ತೆ.

(2) ಈ ಬಾಬತು ಹರಾಜ್ ತಾಲ್ಲೂಕು ಕಛೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರು ಅಥವಾ ಕರಸ್ತೇದಾರ್ರು ಮಾಡಿಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ವವಿಗೆ ಇರತಕ್ಕದ್ದು.

(4.) ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಪ್ಪು ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ

ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ ಮಾಡಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೆ ನೇರೆ ಲೋಕಲ್‌ಸೆಸ್ ಸಹಿತ ಹರಾಜು ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್‌ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಆಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನು ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೇ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿದು ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀರ್ಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಯಿರುವದಿಲ್ಲ. ಮತ್ತು ಅಂಥಾ ಜಮೀರ್ಗಳಲ್ಲಿ ಕಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಲಿ ಜಮೀರ್ಗಳನ್ನ ಇಜಾರೆದಾರನು ಅಗಿಯಕೂಡದು. ಬಂದು ವೇಳೆ ಅಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟುಮಣ ಕಲ್ಲು, ಮತ್ತು ಅದು ರವ್ಹಾಗುವ ಸ್ಥಳ ಈ ಪಬ್ಲೀಲ್ ಕಂಡು ತಾಲ್ಲೂಕು ಅಮಲ್‌ದಾರ್ರಿಂದ ಬಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ವಿ. ಎಸ್. ನರಸುಂಹಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ತಾರೀಖು 31ನೇ ಆಗಸ್ಟ್ 1896.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ಯ 1896–97ನೇ ಸಾಲಿಗೆ ಮುದ್ದಗಿರಿ ತಾಲ್ಲೂಕು ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಚಾರೆ ಜಿನಸುಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂ ಸವಾಲ್ ಆದ್ದರಿಂದ ಸದರೀ ಹಕ್ಕುದಾರಿಯನ್ನ ಈ ಕೆಳಗೆ ಸಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 11 ಘಂಟೆಗೆ ಪುರುವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಮುದ್ದಗಿರಿ ತಾರೀಖು 29—9—96 ಮುದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಚಡದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಶೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಚಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ಸು ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ಶೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡವ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಭಾಯಿದೆ ಭಾಗ, ದರಖಾಸ್ತುದಾರರು ಹೊಂತಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅವರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮ ಅವರಾಯಿ ಫಲ ಜುಟ್ಟುವಳಿಗಳು ಮೇಲ್ಕಂಡ ಪಚಾರೆ ಜಿನಸುಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.